6930877
5/12/23

**<u>ಕರ್ನಾಟಕ ಸರ್ಕಾರ</u>**

04 DEC 2023

ಸಂಖ್ಯೆ:ಆಇ 73 ಟಿಎಆರ್ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ

ಬೆಂಗಳೂರು,ದಿನಾಂಕ: 20-11-2023

**<u>ಸುತ್ತೋಲೆ</u>**

ವಿಷಯ:- ಯೋಜನೆಗಳ ಸಂಬಂಧ ಬಿಡುಗಡೆಯಾದ ಅನುದಾನವನ್ನು ಬ್ಯಾಂಕ್ ಖಾತೆಯಲ್ಲಿಟ್ಟು ವೆಚ್ಚವಾಗದೆ / ಬಾಕಿ ಉಳಿದಿರುವ ಅನುದಾನವನ್ನು ಸಂಚಿತ ನಿಧಿಗೆ ಜಮೆ ಮಾಡುವ ಬಗ್ಗೆ.

*******

ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಕರ್ನಾಟಕ ಖಜಾನೆ ಸಂಹಿತೆ ನಿಯಮಗಳನ್ವಯ ಸರ್ಕಾರದ ಎಲ್ಲಾ ಹಣಕಾಸಿನ ವಹಿವಾಟುಗಳನ್ನು ಸರ್ಕಾರಿ ಖಜಾನೆಯ ಏಜೆನ್ಸಿ ಬ್ಯಾಂಕಿನ ಮೂಲಕ ನಡೆಸಬೇಕಾಗುತ್ತದೆ.

ಸರ್ಕಾರದ ಸುತ್ತೋಲೆ ಸಂ:ಆಇ 01 ಟಿಎಫ್‌ಸಿ 2009, ದಿನಾಂಕ:31.01.2009 ರಲ್ಲಿ ಸಂಚಿತ ನಿಧಿಯಿಂದ ಹಣವನ್ನು ತೆಗೆದು ಮಂಡಳಿಗಳು, ನಿಗಮಗಳು, ಸಹಕಾರ ಸಂಘಗಳು, ಸಾರ್ವಜನಿಕ ವಲಯ ಉದ್ಯಮಗಳು ಅಥವಾ ಜಿಲ್ಲಾಧಿಕಾರಿಗಳು/ಇಲಾಖಾಧಿಕಾರಿಗಳು ತಮ್ಮ ವೈಯಕ್ತಿಕ ಠೇವಣಿ ಖಾತೆಯಲ್ಲಿ ಅಥವಾ ಬ್ಯಾಂಕಿನ ಖಾತೆಯಲ್ಲಿ ಠೇವಣಿ ಇಡುವ ಪದ್ಧತಿಯನ್ನು ನಿಲ್ಲಿಸುವಂತೆ ತಿಳಿಸಲಾಗಿದೆ.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ದಿನಾಂಕ: 31.03.2022 ರ ಅಂತ್ಯಕ್ಕೆ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿಯಲ್ಲಿ ಇಲಾಖೆಗಳಿಗೆ ಬಿಡುಗಡೆಯಾದ ಅನುದಾನಗಳನ್ನು ಆಯಾ ಸಾಲಿನಲ್ಲಿ ವೆಚ್ಚ ಮಾಡದೆ, ಅನುದಾನ ವ್ಯಪಗತವಾಗುವುದನ್ನು ತಪ್ಪಿಸಲು(to avoid lapse of grants) ಹಣವನ್ನು ಸೆಳೆದು ಅನುಷ್ಠಾನ ಏಜೆನ್ಸಿಗಳ ಬ್ಯಾಂಕ್ ಖಾತೆಗಳಲ್ಲಿ ಜಮೆ ಮಾಡುವುದರಿಂದ ಹಣವನ್ನು ಸಂಚಿತ ನಿಧಿಯಿಂದ ಹೊರಗಿಟ್ಟಂತಾಗುತ್ತದೆ ಎಂದು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಕರ್ನಾಟಕ ಬಜೆಟ್ ಕೈಪಿಡಿ ನಿಯಮಗಳನ್ವಯ ವರ್ಷಾಂತ್ಯದಲ್ಲಿ ಬಳಕೆಯಾಗದೇ ಉಳಿದಿರುವ ಅನುದಾನವನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಅಧ್ಯರ್ಪಣೆ ಮಾಡಬೇಕಾಗಿರುತ್ತದೆ. ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಲಾಖಾ ಮುಖ್ಯಸ್ಥರು/ ಜಿಲ್ಲಾಧಿಕಾರಿಗಳು/ ನಿಗಮ/ ಮಂಡಳಿ/ ನಿಯಮಿತ ಮತ್ತು ಇನ್ನಿತರ ಸ್ವಾಯತ್ತ ಸಂಸ್ಥೆಗಳು, ವೆಚ್ಚವಾಗದೆ ಬ್ಯಾಂಕ್ ಖಾತೆಯಲ್ಲಿ ಬಾಕಿ ಉಳಿಸಿಕೊಂಡಿರುವ ಅನುದಾನವನ್ನೂ ಸಹ ಉಳಿತಾಯವೆಂದು ಪರಿಗಣಿಸಿ ಸರ್ಕಾರಕ್ಕೆ ಅಧ್ಯರ್ಪಿಸಬೇಕಾಗುತ್ತದೆ.

ಆದ್ದರಿಂದ, ಇನ್ನು ಮುಂದೆ ಇಲಾಖೆಗಳು ತಮಗೆ ನಿಗದಿಪಡಿಸಿದ ಅನುದಾನವನ್ನು ಕೇವಲ ಖಜಾನೆ ಮೂಲಕ ಮಾತ್ರ ಸೆಳೆಯುವಂತೆ <u>ಯಾವುದೇ ಬ್ಯಾಂಕ್ ಅಥವಾ ಪಿ.ಡಿ.ಖಾತೆಗೆ ಜಮೆ ಮಾಡದಂತೆ ತಿಳಿಸಿದೆ.</u>

E-1246468, ಕಡತ ಸಂಖ್ಯೆ:- DSE/DDO/ACC/4/2023 ರಲ್ಲಿ ಸ್ವೀಕೃತ ಟಪಾಲು ಮಡಗಲಾಗಿದೆ. 28/11/23

V. G.
05/12/2023

SRC
06/12/23

ಹಾಗೂ ಯಾವುದೇ ಯೋಜನೆಗಳಡಿ ಅನುದಾನವು ಉಳಿತಾಯವಾಗುತ್ತಿದ್ದಲ್ಲಿ ಮುಂಚಿತವಾಗಿಯೇ ಅಧ್ಯರ್ಪಣೆ ಮಾಡತಕ್ಕದ್ದು. ಇದರಿಂದ ಅವಶ್ಯಕತೆ ಇರುವ ಕಡೆ ಅನುದಾನ ಒದಗಿಸಲು ಸಹಾಯವಾಗುತ್ತದೆ.

ಒದಗಿಸಿದ ಅನುದಾನವು ವ್ಯಪಗತ (lapse) ಆಗುವುದೆಂದು ಬ್ಯಾಂಕ್ ಖಾತೆ ಅಥವಾ ಪಿ.ಡಿ.ಖಾತೆಯಲ್ಲಿಟ್ಟಲ್ಲಿ ಸಂಬಂಧಪಟ್ಟ ಇಲಾಖಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

(ಪಿ.ಸಿ.ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಖಜಾನೆ ಆಯುಕ್ತರು, 6ನೇ ಮಹಡಿ, ಕೆ.ಪಿ.ಸಿ.ಎಲ್., ಗ್ರೀನ್ ಕಟ್ಟಡ, ಔಷಧ ನಿಯಂತ್ರಣ ಆವರಣ, ಬೆಂಗಳೂರು-560001.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
6. ಎಲ್ಲಾ ಜಿಲ್ಲಾಧಿಕಾರಿಗಳು,
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು.
8. ರಾಜ್ಯದ ಎಲ್ಲಾ ನಿಗಮ/ಮಂಡಳಿ/ನಿಯಮಿತ/ವಿಶ್ವವಿದ್ಯಾಲಯಗಳು/ಸ್ವಾಯತ್ತ ಸಂಸ್ಥೆಗಳಿಗೆ.
9. ಎಲ್ಲಾ ಜಿಲ್ಲಾ ಖಜಾನೆಗಳಾಧಿಕಾರಿಗಳು - ಖಜಾನೆ ಆಯುಕ್ತರ ಮುಖಾಂತರ.
10. ಆರ್ಥಿಕ ಇಲಾಖೆಯ ಅಪರ/ವಿಶೇಷ/ಜಂಟಿ/ಉಪ ಕಾರ್ಯದರ್ಶಿ/ಅಧೀನ/ಶಾಖಾಧಿಕಾರಿಗಳಿಗೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.
12. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ನಲ್ಲಿ ವೀಕ್ಷಿಸಿ.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:- ಕಾಶಿಇ/ಸುತ್ತೋಲೆ/ಸಪ್ರದಕಾ/04/2023-24 E-1246468 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.

ಬೆಂಗಳೂರು. ದಿನಾಂಕ: 19.12.2023

ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 73 ಟಿ ಎ ಆರ್ 2023 ದಿನಾಂಕ:20.11.2023ರನ್ನು ಈ ಕೆಳಕಂಡವರುಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಓಗಳಿಗೆ

ಪ್ರತಿಗಳು:

1) ಲೆಕ್ಕಾಧಿಕಾರಿಗಳು ಹಣ ಮತ್ತು ಪಾವತಿ ವಿಭಾಗ ಕೇಂದ್ರ ಕಛೇರಿ ಕಾಶಿಇ ಬೆಂಗಳೂರು
2) ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳಿಗೆ -ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ
3) ಕಛೇರಿ ಪ್ರತಿ